ಪ್ರೇರೇಪಿಸುತ್ತದೆ. ಕೂತರೆ, ನಿಂತರೆ ದಣಿಯುತ್ತಿದ್ದ ಅಪ್ಪನನ್ನು ಸೂಕ್ತ ತಪಾಸಣೆಗೆಂದು ಸರೋಜ ತನ್ನೊಂದಿಗೆ ಗಂಡನ ಮನೆಗೆ ಕರೆದುಕೊಂಡು ಬಂದಿದ್ದು ಗಂಡ ಅನಿಸಿಕೊಂಡವನಿಗೆ ಪಥ್ಯವಾಗಿರಲಿಲ್ಲ. 'ವಯಸ್ಸಾದ ಮೇಲೆ ಇವೆಲ್ಲಾ ಇದ್ದಿದ್ದೇ...' ಎನ್ನುವ ಅವನ ಮಾತು ಅಪ್ಪನ ಮುದ್ದಿನ ಮಗಳನ್ನು ಚುಚ್ಚಿತ್ತು. ಅಪ್ಪನಿಗೆ ಯಾವ ಮಹಾ ವಯಸ್ಸು? ಆಗಿನ್ನೂ ಐವತ್ನಾಲ್ಕು. ಏನೋ ಒಂದು ಹೇಳಿಬಿಟ್ಟರೆ ಸರಿಯಾ? ತಪಾಸಣೆಯ ನಂತರ ಅಪ್ಪನಿಗೆ ತಕ್ಷಣ ಹಾರ್ಟ್ ಆಪರೇಷನ್ ಮಾಡಿಸಬೇಕೆಂದು ಡಾಕ್ಟರು ತೀರ್ಮಾನ ಹೇಳಿದ್ದರು. ನಾಲ್ಕು ಕಡೆ ಹೃದಯದ ರಕ್ತನಾಳಗಳು ಬ್ಲಾಕ್ ಆಗಿದ್ದುವಂತೆ. ತೆರೆದ ಹೃದಯದ ಶಸ್ತ್ರಚಿಕಿತ್ಸೆ ಡಾಕ್ಟರ ಪ್ರಕಾರ ಅನಿವಾರ್ಯ. ಕೈ ಹಿಡಿದವನು ಹಿಂದೆಮುಂದೆ ನೋಡಿದ್ದ. "ಡಾಕ್ಟರ ಹತ್ರ ಹೋದ್ವಿ ಅಂದ್ರೆ ಯಾವುದೋ ಒಂದು ಕಾಯಿಲೆಯ ಹೆಸರಿಟ್ಟುಬಿಡ್ತಾರೆ..." ಧೋರಣೆಯಿಂದ ಹೇಳಿದ್ದ.

"ಹಾಗಂತ ಸುಮ್ನೆ ಬಿಟ್ಟಿಡೋಕಾಗುತ್ತಾ? ಡಾಕ್ಟರ ಹತ್ರ ಹೋದ್ಮೇಲೆ ಅವರನ್ನ ನಂಬಬೇಕು. ಅವರು ಹೇಳಿದ್ದು ಕೇಳಬೇಕು..."

"ಅದಕ್ಕೇ ಕಣೇ ಆ ಸಾವಾಸಾನೇ ಬೇಡ ಅಂದಿದ್ದು..."

"ಏನಂತಿದೀರಿ ನೀವು?" ತಾನು ಕೇಳಿದ್ದನ್ನು ನಂಬದವಳಂತೆ ಸರೋಜ ಬಿಡುಗಣ್ಣರಳಿಸಿ ಗಂಡನನ್ನು ದಿಟ್ಟಿಸಿದ್ದಳು. ಅವನು ಮುಖ ತಪ್ಪಿಸಿದ್ದ. "ಲಕ್ಷಗಟ್ಲೆ ಖರ್ಚಾಗುತ್ತೆ ಕಣೇ, ಪುಗಸಟ್ಟೆ ಅಲ್ಲ" ಗೊಣಗಿದ್ದ. ಹಾಗಂತ? ದುಡ್ಡಿನ ಮುಖ ನೋಡಿಕೊಂಡು ಅಪ್ಪನನ್ನು ಕಣ್ಣೆದುರೇ ಸಾವಿನಮನೆಯ ಕದ ತಟ್ಟಲು ಬಿಟ್ಟುಬಿಡುವುದಾ? ಮನುಷ್ಯಪ್ರಯತ್ನ ಮಾಡಲೇಬೇಕಲ್ಲ? ತನ್ನ ಅಮಾಯಕ ಅಮ್ಮನ ಮುಖ ನೋಡಿದರೆ ಕರುಳಿಗೆ ಚೂರಿ ಹಾಕಿದಂತಾಗುತ್ತಿತ್ತು ಸರೋಜನಿಗೆ. ಆ ನೋಟದಲ್ಲಿ ಎಷ್ಟೆಲ್ಲಾ ದೈನ್ಯ, ಎಷ್ಟೆಲ್ಲಾ ಹತಾಶೆ, ಏನೆಲ್ಲಾ ಭೀತಿ, ಏನೆಲ್ಲಾ ಬೇಡಿಕೆ... ಸರೋಜ ಅಮ್ಮನ ಕೈ ಹಿಡಿದು ಅಮುಕಿ ಧೈರ್ಯ ತುಂಬಿದ್ದಳು. ಮದುವೆಯಾದ ಮೂರು ವರ್ಷಗಳಲ್ಲಿ ಗಂಡನ ಸ್ವಭಾವವನ್ನು ಅಂಗೈನೆಲ್ಲಿಯಷ್ಟು ಸ್ಪಷ್ಟವಾಗಿ ಅರ್ಥೈಸಿಕೊಂಡಿದ್ದಾಳೆ ಸರೋಜ. ಕಾಸು ಬಿಚ್ಚುವುದು ಅಂದರೆ ಅವನಿಗೆ ಜೀವ ಬಿಡುವಷ್ಟೇ ಸಂಕಟ. ತೀರಾ ಅಗತ್ಯವಾದುದಕ್ಕೂ ಹತ್ತು ಸಲ ಯೋಚಿಸುವ ಗಂಡನಿಂದ ಹೀಗೆ ಜೂಜಲ್ಲಿ ಪಣ ಒಡ್ಡುವಂತೆ ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡಿಸುವುದು ಸ್ವತಾ ದೇವರಿಂದಲೂ ಅಸಾಧ್ಯವೇನೋ. ವಾಸ್ತವವಾಗಿ ಅವನ ಬ್ಯಾಂಕ್ ಅಕೌಂಟಿನಲ್ಲಿ ಎಷ್ಟು ದುಡ್ಡಿದೆ ಅನ್ನುವುದು ಸರೋಜನಿಗೆ ಗೊತ್ತಿಲ್ಲ. ಆದರೆ, ಅದು ಸಣ್ಣ ಮೊತ್ತದ್ದಾಗಿರಲಿಕ್ಕಿಲ್ಲ ಎಂದು ಅವನ ದಿನಚರಿಯನ್ನು ಬಲ್ಲವಳ ಊಹೆ. ಹೈಸ್ಕೂಲಲ್ಲಿ ಮೇಷ್ಟ್ರಾಗಿದ್ದ ಗಂಡ ಮನೆಪಾಠದಲ್ಲೂ ಸಾಕಷ್ಟು ಕಮಾಯಿಸುತ್ತಿದ್ದ. ಸಣ್ಣದೊಂದು ಸ್ಕೂಲು ನಡೆಯುತ್ತಿದೆ ಅನ್ನುವಷ್ಟು ಹೈಸ್ಕೂಲಿನ ಕೊನೆಯ ವರ್ಷದ ಹುಡುಗರು ಅವರ ಮನೆಯಲ್ಲಿ ಜಮಾಯಿಸುತ್ತಿದ್ದರು. ಸೈನ್ಸು, ಮ್ಯಾತ್ಸು ಎಂದು ಮನೆಪಾಠ ಹೇಳಿಸಿಕೊಳ್ಳುತ್ತಿದ್ದರು. ದುಡಿದಿದ್ದರಲ್ಲಿ ನಯಾಪೈಸೆಯೂ ಪೋಲಾಗದೆ ಬ್ಯಾಂಕಿನಲ್ಲಿ ಜಮೆಯಾಗುತ್ತಿತ್ತು. ಗಂಡ ಮನಸ್ಸು ಮಾಡಿದರೆ ಅಪ್ಪನನ್ನು ಉಳಿಸಿಕೊಳ್ಳುವ ಸಾಧ್ಯತೆ ಇದೆ. ಆದರೆ, ಅವನು ಮನಸ್ಸು ಮಾಡುತ್ತಾನೆ ಅನ್ನುವುದು ಊಹಿಸಲು ಅಸಾಧ್ಯವಾದ ಸಂಗತಿ. ಗಟ್ಟಿಮನಸ್ಸು ಮಾಡಿದ್ದಳು ಸರೋಜ. ತನ್ನ, ತನ್ನಮ್ಮನ ಕಿವಿಯ ಬೆಂಡೋಲೆ, ಕೊರಳ ತಾಳಿ ಸರ ಹೊರತುಪಡಿಸಿ ಉಳಿದಿದ್ದನ್ನೆಲ್ಲಾ ಒಟ್ಟುಗೂಡಿಸಿ ಗಂಡನ ಎದುರು ತಂದಿಟ್ಟಿದ್ದಳು. ಚಿನ್ನಕ್ಕೆ ಈಗಿನಂತೆ ಭಾರೀ ಬೆಲೆ ಇರದಿದ್ದ ಕಾಲ. ಅಲ್ಲದೆ, ಇವರ ಬಳಿ ಸೂರೆ ಹೋಗುವಷ್ಟು ಚಿನ್ನದ ಸಂಗ್ರಹವೇನಿರಲಿಲ್ಲ. ಕೃಷಿಕ ಕುಟುಂಬದ ಅಪ್ಪ ಮಧ್ಯಮವರ್ಗದ ಪ್ರತಿನಿಧಿಯಂತಿದ್ದವನು. ಆಗ ಅಡಿಕೆಯ ದರವೂ ಅಷ್ಟಕ್ಕಷ್ಟೇ. ಮನೆಯಲ್ಲಿ ಹೆಚ್ಚಿನ ಖರ್ಚಿಲ್ಲದಿದ್ದುದರಿಂದ ಒಬ್ಬಳೇ ಮಗಳ ಮದುವೆಗೆಂದು ಅಪ್ಪ ಒಂದಿಷ್ಟು ಒಡವೆ ಮಾಡಿಸಿಟ್ಟಿದ್ದ. ಚೆನ್ನಾಗೇ ಮದುವೆ ಮಾಡಿಕೊಟ್ಟಿದ್ದ. ಒಬ್ಬ ಮಗಳೂ ಹುಟ್ಟಿ ಸರೋಜನ ಸಂಸಾರ